## ಸಕ್ಕರೆ ದರ ಹೆಚ್ಚಳ

ಈ ತಿಂಗಳು ಸಕ್ಕರೆ ದರ ಕ್ವಿಂ. ಗೆ ರೂ.100 ಹೆಚ್ಚಳ ಕಂಡಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಸಕ್ಕರೆ ಉತ್ಪಾದನೆ ಕಡಿಮೆ ಇರುವುದರಿಂದ ಹಾಗೂ ಬೇಡಿಕೆ ಹೆಚ್ಚಳದಿಂದ ಸಕ್ಕರೆ ದರ ಹೆಚ್ಚಳವಾಗಿದೆ. ಬ್ರೆಜಿಲ್ ನಲ್ಲಿ ಹವಾಮಾನ ವೈಪರೀತ್ಯದಿಂದ ಸಕ್ಕರೆ ಉತ್ಪಾದನೆ ಕುಂಠಿತವಾಗಬಹುದೆನ್ನಲಾಗಿದೆ. ನಮ್ಮ ದೇಶದ ಉತ್ಪಾದನೆ ಹಿಂದಿನ ವರ್ಷದಷ್ಟೇ ಆಗುವ ನರೀಕ್ಷೆಯಿದೆ. ಭಾರತದಿಂದ ಸಕ್ಕರೆ ರಫ್ತು ಹೆಚ್ಚಳ ಹಾಗೂ ರಫ್ತಿಗೆ ಪೂರಕವಾಗಿರುವುದರಿಂದ ರಫ್ತು ಹೆಚ್ಚಳವಾಗಿದೆ. ಕಬ್ಬನ್ನು ಇಥೆನಾಲ್ ಉತ್ಪಾದನೆಗೆ ಹೆಚ್ಚಿನ ಪ್ರಮಾಣದಲ್ಲಿ ಬಳಸುವುದರಿಂದ ಸಕ್ಕರೆ ಉತ್ಪಾದನೆ ನಯಂತ್ರಿತವಾಗುತ್ತಿದೆ. ಆಗಸ್ಟ್ ತಿಂಗಳಿಗೆ ಸಕ್ಕರೆ ಬಿಡುಗಡೆ ಕೋಟಾ 21 LMT ಎಂದು ನಗದಿಪಡಿಸಿದ್ದಾರೆ. ಇದರಿಂದ ಮುಕ್ತ ಮಾರುಕಟ್ಟೆಯಲ್ಲಿ ಸಕ್ಕರೆ ಲಭ್ಯತೆ ನಯಂತ್ರಿತಗೊಳ್ಳುವುದು ದರ ಹೆಚ್ಚಳಕ್ಕೆ ಪೂರಕವಾಗಿದೆ. ಜಾಗತಿಕವಾಗಿಯೂ ಸಕ್ಕರೆ ದರ ಹೆಚ್ಚಳವಾಗಿದೆ.